# ನೂತನ ತಂತ್ರಜ್ಞಾನ ಬಳಸಿ ಸಾಂಬಾರ ಪದಾರ್ಥ ಬೆಳೆ ಹೆಚ್ಚಿಸಿ

## ರಾಜ್ಯಮಟ್ಟದ ಸಾಂಬಾರ ಪದಾರ್ಥ ಬೆಳೆಗಳ ವಿಚಾರ ಸಂಕಿರಣದಲ್ಲಿ ಡಾ.ಹೋಮಿ ರೈತರಿಗೆ ಕರೆ

**• ಕನ್ನಡಪ್ರಭ ವಾರ್ತೆ** ಶಿವಮೊಗ್ಗ

ಸಾಂಬಾರ ಪದಾರ್ಥ ಬೆಳೆಯುವ ರೈತರಿಗೆ ನೂತನವಾಗಿ ಆವಿಷ್ಕೃತ ತಂತ್ರಜ್ಞಾನವನ್ನು ತಲುಪಿಸಬೇಕು. ಆಗ ಸಾಂ ಬಾರ ಬೆಳೆಗಳಲ್ಲಿ ಸಹಜವಾಗಿ ಉತ್ಪಾದನೆ ಹೆಚ್ಚಳ ವಾಗುತ್ತದೆ ಎಂದು ಕಲ್ಲಿಕೋಟೆ ಅಡಕೆ ಮತ್ತು ಸಾಂಬಾರ ಬೆಳೆಗಳನಿರ್ದೇಶನಾಲಯದನಿರ್ದೇಶಕ ಡಾ.ಹೋಮಿ ಚೆರಿಯನ್ ಹೇಳಿದರು.

ಅವರು ಮಂಗಳವಾರ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾನಿಲಯ, ಅಡಕೆ ಮತ್ತು ಸಾಂಬಾರ ಅಭಿವೃದ್ಧಿ ನಿರ್ದೇಶನಾಲಯದ ಸಂಯುಕ್ತಾಶ್ರಯ ದಲ್ಲಿನವಿಲೆಯ ಜೆಎನ್‌ಎನ್‌ಸಿಇ ಮಹಾ ವಿದ್ಯಾಲಯದಎಂಬಿಎಸಭಾಂಗಣದಲ್ಲಿ ಸಾಂಬಾರ ಬೆಳೆಗಳ ಉತ್ಪಾದನೆ, ಮಾರು ಕಟ್ಟೆ ಮತ್ತು ಮೌಲ್ಯವರ್ಧನೆ ಕುರಿತು ಏರ್ಪಡಿಸಿದ್ದ ರಾಜ್ಯಮಟ್ಟದ ಸಾಂಬಾರ ಬೆಳೆಗಳ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಇತ್ತೀಚೆಗೆ ಸಾಂಬಾರ ಬೆಳೆಗಳ ಬೇಡಿಕೆ ಹೆಚ್ಚುತ್ತಿದೆ. ದೇಶದಲ್ಲಿ ಸಾಂಬಾರ ಪದಾರ್ಥ ಬೆಳೆಯುವ ರಾಜ್ಯಗಳಲ್ಲಿ ಅತಿಹೆಚ್ಚು ಸಾಂಬಾರ ಪದಾರ್ಥ ಬೆಳೆಯುವ ರಾಜ್ಯ ಕರ್ನಾಟಕವಾಗಿದ್ದರೂ ಮಾರುಕಟ್ಟೆಯ ಬೇಡಿಕೆಯಷ್ಟು ಉತ್ಪಾದನೆ ಸಾಧ್ಯವಾಗಿಲ್ಲ ಎಂದ ಅವರು, ವಿಶ್ವವಿದ್ಯಾಲಯಗಳು ಕಾಲ ಕಾಲಕ್ಕೆ ಸಂಶೋಧಿಸುವ, ಆವಿಷ್ಕರಿಸುವ ಅತ್ಯಾಧುನಿಕ ನೂತನ ತಂತ್ರಜ್ಞಾನವನ್ನು ರೈತರ ಮನೆಬಾಗಿಲಿಗೆ ತಲುಪಿಸುವ ಅಗತ್ಯವಿದೆ ಎಂದು ತಿಳಿಸಿದರು.



ನವಿಲೆಯ ಜೆ.ಎನ್.ಎನ್.ಸಿ.ಇ. ಮಹಾವಿದ್ಯಾಲಯದ ಎಂ.ಬಿ.ಎ. ಸಭಾಂಗಣದಲ್ಲಿ ಸಾಂಬಾರು ಬೆಳೆಗಳ ಉತ್ಪಾದನೆ, ಮಾರುಕಟ್ಟೆ ಮತ್ತು ಮೌಲ್ಯವರ್ಧನೆ ಕುರಿತು ಏರ್ಪಡಿಸಿದ್ದ ರಾಜ್ಯಮಟ್ಟದ ಸಾಂಬಾರು ಬೆಳೆಗಳ ವಿಚಾರ ಸಂಕಿರಣದಲ್ಲಿ ಸ್ಮರಣ ಸಂಚಿಕೆ ಬಿಡುಗಡೆ ಮಾಡಲಾಯಿತು.

ಪ್ರತಿವರ್ಷ ರಾಜ್ಯದಲ್ಲಿ ವೈವಿಧ್ಯ ಮಯ ಹವಾಗುಣ ಪ್ರದೇಶಗಳಲ್ಲಿ 16ಕ್ಕೂ ಹೆಚ್ಚಿನ ಸಾಂಬಾರ ಬೆಳೆಗಳನ್ನು ಬೆಳೆಯಲಾಗುತ್ತಿದೆ. ಸಾಂಬಾರ ಬೆಳೆ ಯಲ್ಲಿ ಸುಧಾರಣೆ ಕಾಣಲಾಗಿದೆ. ಆದರೂ ಕಾಣುತ್ತಿರುವ ಏರಿಕೆ ಅತಿ ಕಡಿಮೆ ಎಂದ ಅವರು, ರೈತರಲ್ಲಿ ಅರಿವು ಮೂಡಿಸುವ ಇಂತಹ ವಿಚಾರ ಸಂಕಿರಣ ಗಳು ಪೂರಕ ವಾತಾವರಣ ನಿರ್ಮಿ ಸಲಿವೆ. ಕೃಷಿ ವಿಶ್ವವಿದ್ಯಾಲಯ ಮತ್ತು ಕೃಷಿ ಇಲಾಖಾ ಅಧಿಕಾರಿಗಳು ಸೂಕ್ತ ಮಾರ್ಗದರ್ಶನ ನೀಡಬೇಕು ಎಂದು ಹೇಳಿದರು.

ಕಾಸರಗೋಡು ಕೇಂದ್ರೀಯ ಪ್ಲಾಂಟೇಷನ್ ಬೆಳೆಗಳ ಸಂಶೋಧನಾ ಸಂಸ್ಥೆಯ ನಿರ್ದೇಶಕ ಡಾ.ಪಿ.ಚೌಡಪ್ಪ ಮಾತನಾಡಿ, ತೋಟಗಾರಿಕೆ ಬೆಳೆಗಾರರು ಅಡಕೆ ಬೆಳೆಯನ್ನು ಪ್ರಧಾನ ಬೆಳೆಯನ್ನಾಗಿ ಅವಲಂಬಿಸದೇ ಪರ್ಯಾಯ ಹಾಗೂ ಲಾಭದಾಯಕ ಸಾಂಬಾರು ಬೆಳೆಗಳನ್ನು ಬೆಳೆಯಲು ಮುಂದಾಗಬೇಕು. ಅಡಕೆ ಯೊಂದಿಗೆ ಕಾಳುಮೆಣಸು ಮತ್ತು ಕೋಕೋ ಬೆಳೆದು ಅತಿಹೆಚ್ಚು ಲಾಭ ಗಳಿಸಬಹುದಾಗಿದೆ ಎಂದರು.

ಕೃಷಿ ಮತ್ತು ತೋಟಗಾರಿಕೆ ವಿವಿಯ ಕುಲಪತಿ ಡಾ.ಸಿ.ವಾಸುದೇವಪ್ಪ ಅಧ್ಯಕ್ಷತೆ ವಹಿಸಿದ್ದರು. ಕೃಷಿ ಮತ್ತು ತೋಟ ಗಾರಿಕೆವಿಶ್ವವಿದ್ಯಾಲಯದಸಂಶೋಧನಾ ನಿರ್ದೇಶಕ ಡಾ.ಎಂ.ಕೆ.ನಾಯ್ಕ್, ವಿಸ್ತ ರಣಾ ನಿರ್ದೇಶಕ ಡಾ.ಟಿ.ಎಚ್.ಗೌಡ, ಡಾ.ಜೆ.ವೆಂಕಟೇಶ್ ಉಪಸ್ಥಿತರಿದ್ದರು.